ನೀವು ಕೇಳಿದಿರಿ?

ಮಧು ಹೆಚ್.ಡಿ. ಹಾಸನ

ಹೆಣ್ಣೆಂದರೆ ಪಾದರಸದಂತೆ. ಯಾವ ಪಾತ್ರೆಗೆ ಹಾಕಿದರೂ ಅದರ ಆಕಾರಕ್ಕೆ ಹೊಂದಿಕೊಳ್ಳುವಳು. ಗಂಡು?



ಅವಳ ಆಶಯಕ್ಕೆ ತಕ್ಕಂತೆ ಇರಬೇಕಾದ ಪಾತ್ರೆ(ತ್ರ).

ಪಿ.ಜೆ. ರಾಘವೇಂದ್ರ, ಮೈಸೂರು

ಟಿಕೆಟ್ ತೆಗೆದುಕೊಳ್ಳುವ ವಯಸ್ಸಾದವರೂ ಟಿಕೆಟ್ ಆಕಾಂಕ್ಷಿಗಳಾಗಿದ್ದಾರಲ್ಲಾ?

'ನಿಂತು ಸತ್ತು ನಮಗೆ ಬೈಎಲೆಕ್ಷನ್‌ಗೆ ಅವಕಾಶ ಮಾಡಿಕೊಡಿ' ಎಂದಿದ್ದಾರಂತೆ ಮನೆಯವರು.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ರಾಜಕಾಲುವೆ ಜೋಡೊ ಯಾತ್ರೆ ಮಾಡೋಣವೆಂದಿದ್ದೇನೆ. ತಾವು ಕಾಲುವೆ ದಾಟ ಬರುವಿರೆ?

ಆ ಕೊಳಕನ್ನು ದಾಟಲು ಸೂಕ್ತವಾದ ಜೋಡೋ, ಶೂಸೋ ಸಿಕ್ಕಿದರೆ ಬರುವೆ.

ಅರುಣ್ ಕುಲಕರ್ಣಿ, ನರೇಗಲ್ಲ

ಮಡದಿಯ ಮಾತನ್ನು ಕೇಳುವುದರಿಂದ ಆಗುವ ಲಾಭಗಳಾವುವು?



ನಿರ್ಧರಿಸುವ ಹೊಣೆಯಿಲ್ಲದಿರುವುದರಿಂದ ಮೆದುಳು ಫ್ರೆಷ್ ಆಗಿರುತ್ತದೆ.

ಮಂಡಿ ಕುಮಾರ್, ಬೆಂಗಳೂರು

ದೇವಲೋಕದ ಸುಂದರಿಗೂ, ಭೂಲೋಕದ ಸುಂದರಿಗೂ ವ್ಯತ್ಯಾಸ?

ದೇವಲೋಕದವಳಿಗೆ ಡ್ಯಾನ್ಸಿಂಗ್ ಕಡ್ಡಾಯ.

ಬಿ.ಆರ್. ಉಷಾ, ಕೆನಡಾ

ಎಲ್ಲಾ ಪ್ರಶ್ನೆಗಳಿಗೂ ನೀವೇ ಉತ್ತರ ಕೊಟ್ಟಿದ್ದೀರಾ? ನಿಜ ಹೇಳಿ.

ಊಹೂಂ. ನನಗೆ ಕೇಳಿದ್ದಕ್ಕೆ ಮಾತ್ರ.

ಮಲ್ಲಿಕಾರ್ಜುನ, ಸುರಧೇನುಪುರ

ಭಯ ಭಕ್ತಿ ಇರಬೇಕು ಅಂತ ಮೇಷ್ಟ್ರು ವಿದ್ಯಾರ್ಥಿಗಳಿಗೆ ಏಕೆ ಹೇಳುತ್ತಾರೆ?

ಮುಂದೆ ವಿವಾಹವಾದಾಗ ಅದು ಬೇಸಿಕ್ ಕ್ವಾಲಿಟಿಯಾಗಿ ಪ್ರಯೋಜನವಾಗಲೆಂದು.

ಪಿ. ಜಯವಂತ ಪೈ, ಕುಂದಾಪುರ

ಗೌರವ ಡಾಕ್ಟರೇಟ್ ಪಡೆದವರು 'ಡಾ' ಹಾಕುವುದು ಸರಿಯೆ?

**honoris causa** ಎಂದು ಬಳಸಿದರೆ ಮಾತ್ರ. ಇಲ್ಲವಾದರೆ ಡಾ ಬಳಕೆ ಹೆಸರಿಗೊಂದು ಕಪ್ಪುಚುಕ್ಕೆ.

ರತ್ನಾ ಕೊರವರ

ಬಸ್ ಡಿಪೊ ಮತ್ತು ಬುಕ್ ಡಿಪೋಗಳಿಗೆ ಇರುವ ವ್ಯತ್ಯಾಸವೇನು?

ಅದು ತನು ಸಂಚಾರ ಕೇಂದ್ರ; ಇದು ಮನ ಸಂಸ್ಕಾರ ಕೇಂದ್ರ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ವಿಶ್ವ ವಯಸ್ಕರ ದಿನವನ್ನು 'ವಿಶ್ವ ದೊಡ್ಡೋರ ದಿನ' ಎಂದು ಆಚರಿಸಬಹುದೆ?

ಊಹೂಂ. ಅನೇಕ ವಯಸ್ಕರಲ್ಲಿ ದೊಡ್ಡತನ ಇರುವುದಿಲ್ಲ.

ಅನಸೂಯ ಟಿ. ಕೇದಿಗೆಮನೆ

ಏನು ಮಾತನಾಡಿದರೂ ತಪ್ಪು ತಿಳಿದುಕೊಳ್ಳುವವರಿಗೆ ಬುದ್ಧಿ ಕಲಿಸುವುದು ಹೇಗೆ?

ತಪ್ಪುತಪ್ಪಾಗೇ ಮಾತನಾಡಿ. ನೆಗೆಟಿವ್‌ನ ನೆಗೆಟಿವ್ವೇ ಪಾಸಿಟಿವ್ವು.

ವಿ. ಹಮೀದ್, ವಿಟ್ಲ

ದಾರಿ ತಪ್ಪಿದ ಮಗನಿಗೂ, ಮಾತು ತಪ್ಪಿದ ಮಗನಿಗೂ ಇರುವ ವ್ಯತ್ಯಾಸವೇನು?

ದಾರಿ ತಪ್ಪಿದವ ಅಮೆರಿಕಾವನ್ನು ಕಂಡುಹಿಡಿದ. ಮಾತು ತಪ್ಪಿದವ(ಉಗ್ಗಿದ್ದವನು) ದೊಡ್ಡ ಗಾಯಕನಾದ (ಪ್ರೆಸ್ಲೀ).

ಎನ್. ವೈದೇಹಿ, ಮೈಸೂರು

ಮಾಡಿದ ತಪ್ಪಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿಯೆಂದು ಗೊತ್ತಿದ್ದೂ ಅಪರಾಧಗಳು ಹೆಚ್ಚುತ್ತಿರುವ ಅಸಲಿ ಕಾರಣವೇನು?

ಇಂದಿನ ಕಂತ್ರಿಯೇ ಮುಂದಿನ ಮಂತ್ರಿಯಾಗಬಲ್ಲನೆಂಬ ಕಣ್ಮುಂದಿರುವ ಉದಾಹರಣೆಗಳೇ.

## ವಾರದ ಪ್ರಶ್ನೆ

ವಿಶ್ವನಾಥ ಗಂಗಪ್ಪ

ಸಾಮಾನ್ಯವಾಗಿ ಮಹಿಳೆಯರು ದೇವಸ್ಥಾನದ ಬಳಿಯಿರುವ ಆನೆಯ ಮುಂದೆ ಸೆಲ್ಫಿ ತೆಗೆದುಕೊಳ್ಳುವರಲ್ಲ?

'ಓಹ್! ಯೂ ಲುಕ್ ಸೋ ಸ್ಲಿಮ್' ಎಂದು ಫೇಸ್‌ಬುಕ್ಕಲ್ಲಿ ಕಾಮೆಂಟ್ ಗಳಿಸಲು.

ವಿ. ಹೇಮಂತಕುಮಾರ್, ಬೆಂಗಳೂರು

ಬ್ಯೂಟಿ ಪಾರ್ಲರ್‌ಗೆ ಕನ್ನಡದಲ್ಲಿ ಏನೆಂದು ಹೇಳುತ್ತಾರೆ?

ತಾತ್ಕಾಲಿಕ ರೂಪಾಂತರ ಕೇಂದ್ರ.

ಹರಿತಸ, ಬೆಂಗಳೂರು

ರಬ್ಬರ್ ಸ್ಟ್ಯಾಂಪಿಗೂ, ಪೋಸ್ಟಲ್ ಸ್ಟ್ಯಾಂಪಿಗೂ ವ್ಯತ್ಯಾಸವೇನು?

ರಬ್ಬರ್ ಸ್ಟ್ಯಾಂಪ್ ವ್ಯಕ್ತಿಯ ರೂಪ ಪಡೆದು ರಾಷ್ಟ್ರಪತಿಯಾಗಬಲ್ಲದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ರಾಮನಿಂದ ರಾವಣನೋ, ರಾವಣನಿಂದ ರಾಮನೋ?



ಇಬ್ಬರೂ ವಲ್ಮೀಕದಿಂದಲೇ; ವಾಲ್ಮೀಕಿಯಿಲ್ಲದೆ ರಾಮನೂ ಇಲ್ಲ, ರಾವಣನೂ ಇಲ್ಲ.

ಭಾರತೀ ಗಂಗಾಧರ್, ಬೆಂಗಳೂರು

ಕೆಟ್ಟದಾದರೆ ಹಣೆಬರಹ ಸರಿಯಿಲ್ಲ ಎನ್ನುತ್ತಾರೆ. ಇದು ಸರೀನಾ?

ಇನ್ನೊಬ್ಬರನ್ನು ಹೊಣೆ ಮಾಡುವುದಕ್ಕಿಂತ ಇದೇ ಸರಿ.

ಜಗದೀಶ ಬಿ. ಹೊಸೂರು, ಮೈಸೂರು

ಮದ್ಯಪಾನ, ಧೂಮಪಾನಗಳು ಆರೋಗ್ಯಕ್ಕೆ ಹಾನಿಕರವೆಂಬ ಪ್ರಚಾರದಿಂದ ಸಮಾಜದಲ್ಲಿ ಸುಧಾರಣೆ ಆಗಿದೆಯೆ?

ಆಗಿದೆಯಲ್ಲ! ಆ ಬೋರ್ಡ್‌ಗಳನ್ನು ಬರೆಯುವ, ಮುದ್ರಿಸುವ ಜನರು ಉದ್ಧಾರವಾಗಿದ್ದಾರೆ.

■ ರಾಮ್